**ಸತ್ರ ಮೊಕದ್ದಮೆ ಸಂಖ್ಯೆಃ 66 /2024**

**ಪಿ.ಡಬ್ಲ್ಯೂಃ 1 (ಸಿಡಬ್ಲ್ಯೂಃ1 )**

**ಸಾಕ್ಷಿಯನ್ನು ದಿನಾಂಕ 16.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**(ಮಧ್ಯಂತರ ಅರ್ಜಿಯ ಆದೇಶ ದಿಃ15.6.2026 ರ ಮೇರೆಗೆ ಪಾಟೀಸವಾಲುಃ 1, 3 ರಿಂದ 6 ನೇ ಆರೋಪಿತರ ಪರ ಶ್ರೀ ಬಿ.ಎಸ್ಃ(ಎಲ್.ಎ.ಡಿ.ಸಿ) ವಕೀಲರಿಂದ:)**

**13.** ನನಗೆ ಕನ್ನಡ ಓದು ಬರಹ ಗೊತ್ತಿಲ್ಲ. ನಾಗರಾಜ ಮತ್ತು ಸುಶೀಲಮ್ಮ ರವರ ವಿವಾಹವು ನನ್ನ ಮುಂದಾಳತ್ವದಲ್ಲಿ ಜರುಗಿದೆ. ನಿಪಿ.1 ರ ಸಂಗತಿಗಳನ್ನು ನನಗೆ ಓದಿ ಹೇಳಿರುವುದಿಲ್ಲ.

**14.** ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ದಿಃ2.5.2024 ರ ಗಲಾಟೆಯನ್ನು ನಾನು ನೋಡಿಲ್ಲ. ನನ್ನ ಗಂಡ ತಾಯಪ್ಪ ಯಾವ ಕಾರಣಕ್ಕೆ ನಿಧನ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.5 ರ ಹೇಳಿಕೆಯನ್ನು ನಾನು ಪೊಲೀಸರು ನನಗೆ ಹೇಳಿಕೊಟ್ಟ ರೀತಿಯಲ್ಲಿ ನಾನು ಹೇಳಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದಿಲ್ಲ. ಆರೋಪಿತರು ಹಾಗೂ ನನ್ನ ಗಂಡನ ನಡುವಿನ ಗಲಾಟೆಗೆ ನಾನು ಪ್ರತ್ಯಕ್ಷದರ್ಶಿ ಅಲ್ಲ.

**15.** ನೀವು ಉಲ್ಲೇಖಿಸಿದ ಘಟನೆಯು ರಾತ್ರಿ ಸಮಯದಲ್ಲಿ ಜರುಗಿದ್ದು, ಆ ಕಾಲಕ್ಕೆ ನಿಮ್ಮ ಮನೆಯ ಅಡುಗೆ ಕೆಲಸದಲ್ಲಿ ನೀವು ನಿರತರಾಗಿದ್ದೀರಿ ಎಂದರೆ ಸರಿ . ನಿಮ್ಮ ಗಂಡನಿಗೆ ಯಾರು? ಹೇಗೆ ? ಯಾವ ವಸ್ತುವನ್ನು ಉಪಯೋಗಿಸಿ ಹಲ್ಲೆ ಮಾಡಿರುತ್ತಾರೆ ಎಂಬ ಬಗ್ಗೆ ನಿಮಗೆ ವೈಯಕ್ತಿಕ ಮತ್ತು ನಿಖರ ಮಾಹಿತಿ ಇಲ್ಲ ಎಂದರೆ ಸರಿ . ನಾನು ಬೇರೆಯವರ ಮಾತುಕೇಳಿ ಹಲ್ಲೆ ಕುರಿತಂತೆ ನನ್ನ ಹೇಳಿಕೆಯಲ್ಲಿ ನುಡಿದಿದ್ದೇನೆ ಎಂದರೆ ಸರಿ .

☐

**16.** ನಿಮಗೂ ಮತ್ತು ಆರೋಪಿತರಿಗೂ ಯಾವುದೇ ರೀತಿಯ ಜಗಳ ಕಲಹಗಳು ಜರುಗಿಲ್ಲ ಎಂದರೆ ಸರಿ . ನಾನು ನುಡಿದಂತೆ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ರಕ್ತಸಿಕ್ಕ ಮಣ್ಣು , ಸಾದಾ ಮಣ್ಣು , ಇತ್ಯಾದಿಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆಯಲಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್ ಆರ್ ಎಸ್ಃ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

**17.** ನಾನು ಈ ದಿನ ಪಾಟಿ ಸವಾಲಿನಲ್ಲಿ ನುಡಿದ ಸಂಗತಿಗಳು ಸರಿ ಇವೆ. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಊರಿನ ಪ್ರಮುಖರ ಒತ್ತಾಯದ ಮೇರೆಗೆ ನನ್ನ ಪಾಟಿ ಸವಾಲಿನಲ್ಲಿ ಅಸತ್ಯ ನುಡಿದೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**